ವಿದ್ಯುತ್ ಚಿತಾಗಾರಗಳಲ್ಲಿ ನಡೆಯುವ ಅಂತ್ಯಕ್ರಿಯೆಗಳು ಗಡಿಬಿಡಿಯಲ್ಲಿ ತೀರಾ ಯಾಂತ್ರಿಕವಾಗಿ ಆಗುತ್ತದೆ. ಸಾವಿನ ಮನೆಯ ಎಲ್ಲಾ ಮಗ್ಗುಲುಗಳೂ ಅಲ್ಲಿ ಕಾಣುವುದೇ ಇಲ್ಲ. ಹಾಗಾಗಿ ಬೇರೆ ಎಲ್ಲಾದರೂ ನಡೆಯುವ ಸಾವಿನ ಮನೆಗೆ ಹೋಗಿ ವರದಿ ಮಾಡುವುದು ಉತ್ತಮ" ಎಂದ ಪ್ರಸನ್ನ. ಈ ಅಸೈನ್‌ಮೆಂಟ್ ಐಡಿಯಾ ಅವನಿಗೆ ರೋಮಾಂಚನ ನೀಡಿತ್ತು.

ಈ ಸಲಹೆ ಎಲ್ಲಾ ರೀತಿಯಿಂದಲೂ ಸರಿ ಎನಿಸಿತು ವೆಂಕಟೇಶನಿಗೆ. ಯಾವ ವಯೋಮಾನದವರ ಸಾವಿಗೆ ಹೋದರೆ ಒಳ್ಳೆಯದು ಎಂಬ ಪ್ರಶ್ನೆ ಕಾಡಿತು. ಹಸುಗೂಸುಗಳೋ, ಚೂರು ಬೆಳೆದ ಮಕ್ಕಳೋ, ಯುವಕರೋ, ಮದುವೆಯಾದವರೋ ಅಥವಾ ತುಂಬಾ ವಯಸ್ಸಾದವರೋ, ಹೆಣ್ಣುಮಕ್ಕಳ ಸಾವಿನಲ್ಲಿ ಹೆಚ್ಚು ಶೋಕವಿರುತ್ತದೋ, ಗಂಡುಮಕ್ಕಳ ಸಾವಿನಲ್ಲೋ. ಈಗ ಅವನಿಗೆ ತನ್ನ ವರದಿ ಯಾವ ರೀತಿ ಇರಬೇಕೆಂಬ ಚೌಕಟ್ಟಿನ ಸ್ಪಷ್ಟ ಚಿತ್ರಣ ಮೂಡುತ್ತಿತ್ತು. 'ಸಾವಿನಲ್ಲಿ ಹೆಣ್ಣು ಗಂಡು ಅನ್ನೋದು ಬರೋದೆ ಇಲ್ಲ, ಸಾವು ಸಾವೇ' ಎಂದ ಪ್ರಸನ್ನನ ವಾದ ವೆಂಕಟೇಶನಿಗೆ ಅಷ್ಟು ಸರಿ ಎನಿಸಲಿಲ್ಲ. ಹೆಣ್ಣು ತಾನು ಹುಟ್ಟಿದ ಮನೆಯಲ್ಲಿ ಸಾಯುವುದಕ್ಕೂ ಗಂಡನ ಮನೆಯಲ್ಲಿ ಸಾಯುವುದಕ್ಕೂ ವ್ಯತ್ಯಾಸವಿದೆ ಎಂಬುದು ಅವನ ಅನಿಸಿಕೆ. ತಮ್ಮ ಮನೆಗಳಲ್ಲಿ ಹಾಗೂ ತಮ್ಮ ನೆನಪಿಗೆ ಬಂದ ಹೆಣ್ಣುಮಕ್ಕಳ ಸಾವಿನ ಸಂದರ್ಭಗಳನ್ನು ನೆನಪಿಸಿಕೊಳ್ಳಲು ಇಬ್ಬರೂ ಪ್ರಯತ್ನಿಸಿದರು. ಆದರೆ ವೆಂಕಟೇಶನ ಹೇಳಿಕೆಗೆ ಪುಷ್ಟಿ ನೀಡುವ ಆಧಾರಗಳು ನೆನಪಾಗಲಿಲ್ಲ. ಹಾಗಾಗಿ ಆ ಬಗ್ಗೆ ನಿರ್ದಿಷ್ಟವಾಗಿರುವುದು ಬೇಡ ಎಂಬ ತೀರ್ಮಾನವಾಯಿತು.

ಉಳಿದ ಪ್ರಶ್ನೆ ವಯಸ್ಸಿನದು. ತೀರಾ ವಯಸ್ಸಾಗಿ ಹೆಚ್ಚು ದಿನ ಕಾಯಿಲೆ ಬಂದು ಸತ್ತವರ ಮನೆಗೆ ಹೋಗುವುದು ಬೇಡ, ಏಕೆಂದರೆ ಸತ್ತ ವ್ಯಕ್ತಿಗೂ, ಆತನ ಮನೆಯವರಿಗೂ ಅದು ದೊಡ್ಡ ಬಿಡುಗಡೆಯಾಗಿದ್ದು ಸಾವಿನ ತೀವ್ರತೆ ಅಲ್ಲಿರುವುದಿಲ್ಲ ಎಂಬ ತೀರ್ಮಾನಕ್ಕೆ ಇಬ್ಬರೂ ಬಂದರು. ಹಸುಗೂಸು ಸತ್ತಾಗಲೂ ಸನ್ನಿವೇಶ ಹಾಗೇ ಇರುತ್ತದೆ ಎಂದ ಪ್ರಸನ್ನ ತನ್ನ ಪಕ್ಕದ ಮನೆಯಲ್ಲಾದ ಘಟನೆ ಹೇಳಿದ.

ಪಕ್ಕದ ಮನೆಯಲ್ಲಿ ಹುಟ್ಟಿದ ಮಗು ಒಂದೇ ವಾರಕ್ಕೆ ತೀರಿಹೋಗಿತ್ತು. ಅದನ್ನು ಅವರು ಯಾರಿಗೂ ತಿಳಿಸಲೇ ಇಲ್ಲ. ಕತ್ತಲಾದ ಮೇಲೆ ಒಂದು ಬಿಳಿವಸ್ತ್ರದಲ್ಲಿ ಸುತ್ತಿಕೊಂಡು ಹೋಗಿ ಹತ್ತಿರದ ಸ್ಮಶಾನದಲ್ಲಿ ಹೂಳಿ ಬಂದರು. ಆ ಮಗುವಿನ ತಾಯಿ ರಾತ್ರಿಯೆಲ್ಲಾ ದುಃಖಿಸುತ್ತಿದ್ದಳು. ಬೆಳಗ್ಗೆಯೂ ಅಳು ನಿಂತಿರಲಿಲ್ಲ. ಉಳಿದವರು ತಮ್ಮ ದಿನನಿತ್ಯದ ಕೆಲಸಗಳಲ್ಲಿ ತಲ್ಲೀನರಾದರು. ಆಕೆಯ ಗಂಡನೂ ಆಫೀಸಿಗೆ ಹೋಗಿಬಿಟ್ಟ. ಆಕೆ ಮಾತ್ರ ಅಳುತ್ತಲೇ ಇದ್ದಳು ಎನ್ನುತ್ತಾ ಮಾತು ಮುಗಿಸಿದ ಪ್ರಸನ್ನ. ಸ್ವಲ್ಪ ಹೊತ್ತು ಇಬ್ಬರೂ ಮಾತಾಡಲಿಲ್ಲ. ಏನೋ ದುಗುಡ. ಅಷ್ಟರಲ್ಲಿ ಊಟ ಬಂತು.

"ಬಡವರ ಸಾವಿನ ವರದಿ ಮಾಡ್ತೀಯೋ, ಇಲ್ಲಾ ಶ್ರೀಮಂತರದ್ದೋ" ರೋಟಿ ದಾಲ್ ಬಾಯಿಗಿಡುತ್ತಾ ಪ್ರಶ್ನೆ ಹಾಕಿದ ಪ್ರಸನ್ನ. ಹಾಗೇ ಮುಂದುವರಿದು ಒಂದೊಂದು ಧರ್ಮದಲ್ಲಿ ಸತ್ತಾಗ ಬೇರೆ–ಬೇರೆ ಆಚರಣೆ ಇರುತ್ತೆ ಎಂಬ ಇನ್ನೊಂದು ಅನುಮಾನವನ್ನೂ ಮುಂದಿಟ್ಟ. ಗಂಭೀರವಾಗಿ ಕುರ್ಚಿ ಹಿಂದಕ್ಕೊರಗಿದ ವೆಂಕಟೇಶ. ಅವನ ಸಂದಿಗ್ಧವನ್ನು ಅರ್ಥಮಾಡಿಕೊಂಡ ಪ್ರಸನ್ನ "ತುಂಬಾ ಯೋಚನೆ ಮಾಡೋದು ಬೇಡ, ಒಂದೆರಡು ಕಡೆ ಹೋಗು, ಅಲ್ಲಿ ಕಂಡದ್ದನ್ನು ದಾಖಲಿಸು" ಎಂಬ ಸಲಹೆ ನೀಡಿದ. ವೆಂಕಟೇಶನಿಗೂ ಅದೇ ಸರಿ ಅನ್ನಿಸಿತು.

ಆದರೆ ಹೇಗೆ ಹೋಗುವುದು, ಯಾವ ಊರಿನಲ್ಲಿ ಯಾರು ಸತ್ತಿದ್ದಾರೆ ಅಂತ ಹೇಗೆ ಗೊತ್ತಾಗುತ್ತೆ, ಅದೂ ಅಲ್ಲದೆ ನಾನು ನಿಮ್ಮ ಮನೆಯ ಸಾವಿನ ವರದಿ ಮಾಡಲು ಬಂದಿದ್ದೇನೆ ಅಂತ ಹೇಗೆ ಹೇಳುವುದು, ಹಾಗೆ ಹೇಳಿದರೆ ಯಾರಾದರೂ ನಂಬುತ್ತಾರಾ, ಹೊಡೆದು ಓಡಿಸುವುದಿಲ್ಲವಾ... ಅನೇಕ ಪ್ರಶ್ನೆಗಳು ಇಬ್ಬರಿಗೂ ಎದುರಾದವು. ಸಾವಿನ ವರದಿಗಾರಿಕೆ ಎಂದರೆ